International Journal of Kannada Research
www.kannadajournal.com

**ISSN: 2454–5813**
IJKR 2022; 8(1): 37-41
© 2022 IJKR
www.kannadajournal.com
Received: 21-11-2021
Accepted: 23-12-2021

**ಡಾ. ಎನ್.ಆರ್.ಚಂದ್ರೇಗೌಡ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

**Corresponding Author:**
**ಡಾ. ಎನ್.ಆರ್.ಚಂದ್ರೇಗೌಡ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

# ಕನ್ನಡ ನಾಟಕ ಪರಂಪರೆ

**ಡಾ. ಎನ್.ಆರ್.ಚಂದ್ರೇಗೌಡ**

ಕಾವ್ಯ, ಕಥೆ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳಿಗಿಂತ ನಾಟಕ ಪ್ರಕಾರ ಪ್ರಮುಖ ಸಾಹಿತ್ಯ ವಾಹಿನಿಯಾಗಿದ್ದು, ಸಂಭಾಷಣೆಗಳಿಂದ ಕಟ್ಟಿದ ಒಂದು ಭಾಷಾಬಂಧವೆಂದು ಕರೆಯುವರು. ಸಾಹಿತ್ಯ ಪ್ರಕಾರಗಳಲ್ಲಿ ನಾಟಕವು ಭಾರತೀಯ ಮತ್ತು ಪಾಶ್ಚಾತ್ಯ ಪರಂಪರೆಯಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ಅದು ಕಲಾಪ್ರಕಾರವಾಗಿಯೂ ಸಾಹಿತ್ಯ ಪ್ರಕಾರವಾಗಿಯೂ ಶ್ರೇಷ್ಠವಾದುದೆಂದು ಕವಿಗಳು, ಲಾಕ್ಷಣಿಕರು, ವಿದಾಂವ್ಸರು ಒಪ್ಪಿಕೊಂಡು ವಿಶ್ವದಲ್ಲಿಯೇ ಪ್ರಮುಖ ಸ್ಥಾನಮಾನವನ್ನು ಪಡೆದಿದೆ. ಸಾಹಿತ್ಯವನ್ನು ದೃಶ್ಯ ಮತ್ತು ಶ್ರವ್ಯವೆಂದು ಎರಡು ಗುಂಪಾಗಿ ವಿಭಾಗಿಸಿದ್ದು, ಮೊದಲನೆಯದಕ್ಕೆ ನಾಟಕ ಸಾಹಿತ್ಯ ಸೇರುತ್ತದೆ. ಹಾಗೆಯೇ ನಾಟಕವು ದೃಶ್ಯ ಮತ್ತು ಶ್ರವ್ಯ ಎರಡೂ ಹಿನ್ನೆಲೆಯಲ್ಲಿ ಮುಖ್ಯವಾದುದೆ. ಅದನ್ನು ರೂಪಕ ಸಾಹಿತ್ಯವೆಂದು ಕರೆಯಬಹುದು. ನಾಟಕ ಸಂಕೀರ್ಣ ಜಾತಿಗೆ ಸೇರಿದ ಕಲಾ ಪ್ರಕಾರವಾಗಿದೆ. ಕಲೆ ಎಂದರೆ ರಂಗ ಭೂಮಿಗೆ ಸಂಬಂಧಿಸಿದ್ದಾಗಿದೆ. ರಂಗ ಭೂಮಿ ಎಂಬುದಕ್ಕೆ ಆಟ ಅಥವಾ ನಾಟಕ ಆಡುವ ಸ್ಥಳವೆಂದು ಸಾಮಾನ್ಯ ಅರ್ಥ. ಅದರಲ್ಲಿ ಬರವಣಿಗೆ ರೂಪದ ಸಾಹಿತ್ಯವಿದೆ. ಅದನ್ನು ಬರೆದ ಲೇಖಕನು ಇದ್ದಾನೆ. ಇವೆರಡರಲ್ಲಿಯೂ ನಾಟಕಕಾರ, ಅಭಿನಯಿಸುವ ನಟರು, ಪ್ರೇಕ್ಷಕರು/ಸಹೃದಯರು, ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪ, ಚಿತ್ರ, ಅಭಿನಯ, ವೇಷ–ಭೂಷಣ ಮುಂತಾದುವು ಕಂಡುಬರುತ್ತವೆ. ಕಲಾಪ್ರಕಾರ ಎಲ್ಲಾ ಸ್ವಭಾವಗಳ ಜನರನ್ನು ಏಕಕಾಲದಲ್ಲಿ ರಂಜಿಸುವ ಮಾಧ್ಯಮವಾದರೆ, ಸಾಹಿತ್ಯ ಪ್ರಕಾರ ಸಹೃದಯರನ್ನು ಆಕರ್ಷಿಸಿ ರಂಜಿಸುವ ಮಾಧ್ಯಮವಾಗಿದೆ. ಒಟ್ಟಾರೆಯಾಗಿ ನಾಟಕ ಸಾಮೂಹಿಕ ಮನೋರಂಜನೆಯ ಅತ್ಯಂತ ಪ್ರಮುಖವಾದ ಮಾಧ್ಯಮ. ಇದು ಸಾಹಿತ್ಯ ಕೃತಿ ಮಾತ್ರವಾಗಿರದೆ ಹಲವು ಕಲೆಗಳ ಸಂಯುಕ್ತ ರೂಪವೂ ಆಗಿದೆ.

'ಕಾವ್ಯೇಷು ನಾಟಕಂ ರಮ್ಯಂ' ಕಾವ್ಯದಲ್ಲಿ ನಾಟಕವೇ ರಮ್ಯವಾದುದೆಂದು ನಮ್ಮವರು ಮೊದಲಿನಿಂದಲೂ ಹೇಳಿದರು. 'ಲೋಕವೃತ್ತಾನುಕರಣಂ ನಾಟ್ಯಂ' ಎಂದು ಭರತನು ಹೇಳಿದ್ದಾನೆ. ಲೋಕ ವ್ಯವಹಾರದಲ್ಲಿ ಮನುಷ್ಯನಿಗೆ ಬಗೆಯ ಕಷ್ಟ ಕೋಟಲೆಗಳು, ಸುಖ ದುಃಖ, ಸೋಲು ಗೆಲುವು, ವ್ಯಕ್ತಿ ಮನೋಧರ್ಮಗಳಿದ್ದು ಬದುಕಿನಲ್ಲಿ ದುಃ ಖವಿದ್ದರೂ ಅದರ ಅನುಕೃತಿಯಲ್ಲಿ ಸುಖವಿರುತ್ತದೆ. ಜೀವನ ರಂಗದಲ್ಲಿ ಅಸಂಬದ್ಧವಾದುದು ರಂಗದ ಮೇಲೆ ಸುಸಂಬದ್ಧವಾಗಿ ಕಾಣಿಸಿಕೊಳ್ಳುತ್ತದೆ ಎಂದಿದ್ದಾನೆ ಭರತ. ಈತನ ನಾಟ್ಯಶಾಸ್ತ್ರದಲ್ಲಿ ನಾಟಕ ಸೃಷ್ಟಿಯ ಹಿನ್ನೆಲೆಯಲ್ಲಿ ಹಲವಾರು ಪೌರಾಣಿಕ ಸಂಗತಿಗಳ ಬಗ್ಗೆ ವಿವರಣೆಯಿದೆ. 'ನಾಟಕ' ನಾಟ್ಯದ ಬೆಳೆದ ರೂಪವಾದರೂ ಇನ್ನೊಂದು ಅರ್ಥದಲ್ಲಿ ಅವೆರಡೂ ಸಮಾನಾರ್ಥಕ ಪದಗಳಾಗಿ ಬಳಕೆಯಾಗಿವೆ. ಭರತಮುನಿ ತನ್ನ ನಾಟ್ಯಶಾಸ್ತ್ರದಲ್ಲಿ ಹೇಳಿರುವ ಲಕ್ಷಣಗಳು ನಾಟಕಶಾಸ್ತ್ರದ ಲಕ್ಷಣಗಳು ಆಗಿವೆ ಎಂಬುದು ಈ ದೃಷ್ಟಿಯಿಂದ ಮುಖ್ಯವಾದ ಅಂಶವಾಗಿದೆ. 'ನಟನಾಕೃತಿ ತಾನೆ ಲೋಕದೊಂದಾಕರಂ' ಎಂಬ ಪಂಪ ಕವಿಯ ಮಾತು ನಾಟಕದ ವ್ಯಾಪ್ತಿಯನ್ನು ಹಿರಿಮೆಯನ್ನು ಧ್ವನಿಸುತ್ತದೆ. 'ನೃತ್ಯದೊಳು ಹಸ್ತಾಂಗ ದೃಷ್ಟಿಗತಿ ಪದ್ಧತಿಯೊಳಾಡೆ ನಾಟಕಮನಿಕ್ಕುಂ' ಎಂದು 14 ನೇ ಶತಮಾನದ ಅಭಿನವ ಮಂಗರಾಜನು ತನ್ನ 'ಅಭಿನವಾಭಿದಾನ' ಕೃತಿಯಲ್ಲಿ ಹೇಳಿದ್ದಾನೆ. ಬೇಂದ್ರೆಯವರು 'ನಾಟ್ಯವನ್ನು ನಾಟಕದ ಅರ್ಥದಲ್ಲಿ 'ಅಷ್ಟಾಂಗ ನಾಟ್ಯಕ್ಕೆಯೆ ನಾಟ್ಯಯೋಗ'ವೆಂದು ಕರೆಯುತ್ತಿರುವೆನು' ಎಂದಿದ್ದಾರೆ.

ನಾಟಕದ ಸ್ವರೂಪ ಮತ್ತು ಅದರ ಹುಟ್ಟನ್ನು ಕುರಿತು ವಿವೇಚಿಸಿರುವ ವಿದ್ವಾಂಸರುಗಳಲ್ಲಿ ಹೆಚ್ಚಾಗಿ ಅದು ಅನುಕರಣೆಯಿಂದ ಮೂಡಿದ್ದು ಎಂಬುದರ ಬಗ್ಗೆ ಏಕಾಭಿಪ್ರಾಯವನ್ನು ಹೊಂದಿದ್ದಾರೆ. ನಾಟಕವನ್ನು ಕುರಿತು ಮೊತ್ತಮೊದಲು ವಿವೇಚಿಸಿದ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ನಾಟಕವನ್ನು ಕುರಿತು ಪ್ರಥಮವಾಗಿ ಶಾಸ್ತ್ರಗ್ರಂಥವೊಂದನ್ನು ಬರೆದ ಭಾರತೀಯ ವಿದ್ವಾಂಸ ಭರತಮುನಿ ಇವರಿಬ್ಬರೂ ಕೂಡ ನಾಟಕ ಅನುಕರಣೆಯಿಂದಾಗುವ ಕಲೆ ಎಂದು ಹೇಳಿದ್ದಾರೆ. ಪೌರಾಣಿಕ ಕಲ್ಪನೆಯಲ್ಲಿಯೂ ಐತಿಹಾಸಿಕ

ಆಧಾರಗಳಲ್ಲಿಯೂ ಇದು ನಿಜವೆನಿಸುತ್ತದೆ. (ಕುವೆಂಪು ಅವರ ನಾಟಕಗಳು– ಮಳಲಿ ವಸಂತಕುಮಾರ್) ಒಂದು ಉತ್ತಮವಾದ ನಾಟಕ ಕೃತಿ ರಂಗ ಭೂಮಿಯ ಮೇಲೆ ಅಭಿನಯಕ್ಕೆ ಯೋಗ್ಯವಾಗುವ ಕಥಾರೂಪ ನಾಟಕವೆನಿಸಿಕೊಳ್ಳುತ್ತದೆ. ಅದು ಭಾಷೆಯ ಮೂಲಕವೇ ನಡೆಯಬೇಕಾದ ಒಂದು ಸೃಜನ ಕ್ರಿಯೆ. ವಸ್ತು, ಸಂವಿಧಾನ, ಪಾತ್ರ, ಅಭಿನಯ, ರಂಗ ಭೂಮಿ ಮುಂತಾದುವು ಅದರ ಅನಿವಾರ್ಯ ಅಂಗಗಳಾಗಿರುತ್ತವೆ. ನಾಟಕ ಗದ್ಯವಾಗಬಹುದು ಅಥವಾ ಪದ್ಯವಾಗಬಹುದು. ಅದು ರಂಗದ ಮೇಲೆ ಪಾತ್ರಗಳ ಅಭಿನಯದ ಮೂಲಕ ಸುಂದರವಾದ ಕಲಾತ್ಮಕ ಅಭಿವ್ಯಕ್ತಿಯನ್ನು ಪಡೆದುಕೊಳ್ಳಬೇಕು. ಹೀಗೆ ನಾಟಕ ಶ್ರವ್ಯದ ಜೊತೆಗೆ ದೃಶ್ಯವೂ ಆದಾಗ ಹೆಚ್ಚು ಮಹತ್ವವನ್ನು ಪಡೆದುಕೊಳ್ಳುತ್ತದೆ. ನಾಟಕದಲ್ಲಿ ಸಾಹಿತ್ಯ ಕಲೆ ನಾಟ್ಯದ ಸಹಜ ನಿಯಮಗಳಿಗೆ ಒಳಗಾಗಿರುತ್ತದೆ. ನಾಟಕ ಸಾಹಿತ್ಯ ಕೃತಿಯಾಗಿ ಸ್ವತಂತ್ರವಾಗಿ ನಿಲ್ಲಬಲ್ಲದಾದರೂ ಸ್ವಯಂಪೂರ್ಣ ಕೃತಿಯಾಗುವುದಿಲ್ಲ. ನಾಟ್ಯದಲ್ಲಿ ಕಾವ್ಯಗುಣ ಸಾಹಿತ್ಯಾಂಶವನ್ನು ಒದಗಿಸಬಲ್ಲದು. ಆದರೆ ನಾಟಕಕಾರ ಇನ್ನೂ ಉದ್ದೇಶಿಸಿರುವ ಕಲಾಗುಣ ಇಲ್ಲಿ ಸಾಧ್ಯವಿಲ್ಲ. ಅವನ್ನು (ಅಭಿನಯ, ನೃತ್ಯ, ಸಂಗೀತ ಮುಂತಾದುವು) ಹೊರಗಿನಿಂದಲೇ ಪಡೆಯಬೇಕಾಗುತ್ತದೆ. ನಾಟಕದ ರಸಸ್ವಾದನೆಯಾಗುವುದು ಸಾಹಿತ್ಯದ ಜೊತೆಗೆ ಅದರ ಪೋಷಕ ಕಲೆಗಳನ್ನು ಔಚಿತ್ಯವರಿತು ಉಪಯೋಗಿಸಿಕೊಂಡಾಗ ಮಾತ್ರ. ನಾಟಕ ಹಲವು ಅಂಗಗಳ ಒಂದು ಸಂಯುಕ್ತ ರೂಪ. ವಸ್ತು, ಸಂವಿಧಾನ ಮತ್ತು ಪಾತ್ರ ಅದರ ಒಳ ಅಂಗಗಳು; ರಂಗಮಂಟಪ, ನಟರು ಮತ್ತು ಪ್ರೇಕ್ಷಕರು ಅದರ ಹೊರ ಅಂಗಗಳು. ಇವುಗಳ ಸಜೀವ ಸಾಹಿತ್ಯಾಭಿವ್ಯಕ್ತಿ ನಾಟಕಕ್ಕೆ ಪೂರ್ಣರೂಪವನ್ನು ತಂದುಕೊಡುತ್ತದೆ.

ಕಾದಂಬರಿ ಓದುವುದಕ್ಕಾಗಿಯೇ ರಚಿತವಾಗಿದೆ ಎಂಬಂತೆ ನಾಟಕವೂ ರಂಗ ಭೂಮಿಯಲ್ಲಿ ಅಭಿನಯಿಸಲಿಕ್ಕಾಗಿಯೇ ಇದೆ. ಇಲ್ಲಿ ನಟರು ಕಥೆಯ ಪಾತ್ರಗಳನ್ನು ಅನುಕರಿಸಿ, ಅಭಿನಯಿಸಿ ತೋರಿಸುತ್ತಾರೆ. ನಾಟಕವು ಕ್ರಿಯೆ ಹಾಗೂ ಸಂಭಾಷಣೆಯ ಮೂಲಕ ಅನುಕರಿಸಿ ಆಡಿ ತೋರಿಸುತ್ತದೆ. ನಾಟಕದಲ್ಲಿ ಇಂತಿಷ್ಟು ಅಂಕಗಳು ಮತ್ತು ದೃಶ್ಯಗಳನ್ನು ಮಾಡಿಕೊಂಡು ಸಾಮಾನ್ಯವಾಗಿ ಮೂರು ಘಂಟೆಗಳ ಒಳಗೆ ಅಥವಾ ಇನ್ನೂ ಕಡಿಮೆ ಹೊತ್ತಿನಲ್ಲಿ ಅಭಿನಯಿಸಲು ಸಾಧ್ಯವಾಗುವಂತೆ ಸಂಭಾಷಣೆ, ಕ್ರಿಯೆಗಳ ಹಂದರವನ್ನು ಜೋಡಿಸಿ ಮಹಾಕಾವ್ಯಗಳೂ ಕಾದಂಬರಿ ಗಳೂ ಉಂಟುಮಾಡುವ ಶ್ರೇಷ್ಠ ಪರಿಣಾಮವನ್ನು ಸ್ವಲ್ಪ ಕಾಲದ ಅವಕಾಶದಲ್ಲಿಯೇ ಆಕರ್ಷಕವಾಗಿ ಮಾಡಿಕೊಡಬೇಕಾಗುತ್ತದೆ.

ನಾಟಕದ ವಸ್ತು, ಸಂವಿಧಾನ, ಪಾತ್ರ, ಅಭಿನಯ, ರಂಗಭೂಮಿ, ಪ್ರೇಕ್ಷಕರು, ರಸ ಇವುಗಳು ನಾಟಕದ ಪ್ರಮುಖವಾದ ಅಂಗಗಳು:

**ವಸ್ತು:** ನಾಟಕದ ಪ್ರಮುಖವಾದ ಅಂಗ ವಸ್ತು. ಇದಿಲ್ಲದೆ ನಾಟಕದ ಅಸ್ತಿತ್ವವೆ ಇರುವುದಿಲ್ಲ. ಅರಿಸ್ಟಾಟಲ್ ರುದ್ರ ನಾಟಕದಲ್ಲಿ ಆರು ಅಂಗಗಳಿವೆ ಎಂಬುದನ್ನು ಸೂಚಿಸಿ, ವಸ್ತುವಿಗೆ ಪ್ರಥಮ ಸ್ಥಾನವನ್ನು ಕೊಡುತ್ತಾನೆ. ನಾಟಕದ ವಸ್ತುವಿನ ಬಗ್ಗೆ ಭರತಮುನಿ 'ಇದಮಿತ್ಥಂ' ಎಂದು ಹೇಳುತ್ತಾನೆ. ಕೆಲವು ನಿಷಿದ್ಧಗಳನ್ನು ಸೂಚಿಸುತ್ತಾನೆ. ಈತ ಕಥಾಭಾಗವನ್ನೇ ನಾಟಕದ ವಸ್ತು ಎಂದು ಕರೆಯುತ್ತಾನೆ. ಭಾರತೀಯ ಮತ್ತು ಪಾಶ್ಚಾತ್ಯ ನಾಟಕಗಳನ್ನು ಕುರಿತ ಲಕ್ಷಣಗಳನ್ನು ಗಮನಿಸಿದಾಗ ನಾಟಕದಲ್ಲಿ ಉದಾತ್ತಾ ವಸ್ತು ಇರಬೇಕು ಎಂಬ ಕಲ್ಪನೆ ಎರಡೂ ಕಡೆ ಸ್ಪಷ್ಟವಾಗಿ ಕಂಡುಬರುತ್ತದೆ. ಕನ್ನಡದಲ್ಲಿ ಆಧುನಿಕ ನಾಟಕಕಾರರು ಸಾಮಾಜಿಕ ವಸ್ತು ವಿಷಯಗಳನ್ನು ಬಹುತೇಕವಾಗಿ ರಚಿಸುತ್ತಿದ್ದರೂ ಕನ್ನಡದಲ್ಲಿ ಮಹತ್ವದ ನಾಟಕಗಳು ಪೌರಾಣಿಕ ಮತ್ತು ಐತಿಹಾಸಿಕ ವಸ್ತುಗಳನ್ನು ಕುರಿತು ರಚನೆಯಾಗಿವೆ. ವಸ್ತುವಿನ ಆಯ್ಕೆಯಲ್ಲಿ ನಿಯಮದ ಅವಶ್ಯಕತೆಯಿಲ್ಲ. ಬದುಕಿಗೆ ಸಂಬಂಧಪಟ್ಟ ಯಾವುದೇ ವಿಷಯ ವಸ್ತುವಾಗಬಹುದು. ಮಾನವನಲ್ಲಿ ಸಹಜವಾಗಿರುವ ಪ್ರಣಯ, ಕ್ರೋಧ, ವಂಚನೆ, ಉಪಕಾರ, ಮತ್ಸರ, ಶೋಕ ಮುಂತಾದ ಭಾವನೆಗಳು ಅಲ್ಲಿ ಒಡಮೂಡಬಹುದು. ಅಲ್ಲಿ ಮಂಗಳ ಅಮಂಗಳದ, ಹುಟ್ಟು ಸಾವುಗಳ, ಬೇಕು ಬೇಡಗಳ ಪ್ರಶ್ನೆಯಿಲ್ಲ. ವ್ಯಕ್ತಿ ವ್ಯಕ್ತಿಗಳಲ್ಲಿ ಘರ್ಷಣೆ, ಒಬ್ಬನೇ ವ್ಯಕ್ತಿಯಲ್ಲಿರುವ ವಿವಿಧ ಪ್ರವೃತ್ತಿಗಳಲ್ಲಿ ಪರಸ್ಪರ ಘರ್ಷಣೆಗಳು ನಾಟಕದ ವಸ್ತುವಾಗಬಹುದು.

**ಸಂವಿಧಾನ:** ನಾಟಕದ ವಸ್ತು ಪಾತ್ರಗಳನ್ನು ಇತರೆ ಸಲಕರಣೆಗಳನ್ನು ಮುಂದಿಟ್ಟು ಇದು ನಾಟಕ ಎಂದು ಹೇಳಲು ಸಾಧ್ಯವಿಲ್ಲ. ಒಂದು ಮನೆಯನ್ನು ಕಟ್ಟಬೇಕಾದರೆ ಸೂಕ್ತ ವಸ್ತುಗಳನ್ನು ತಂದು ಕ್ರಮಾನುಸಾರವಾಗಿ ಹೊಂದಿಸಿ ಕಟ್ಟಿದಾಗ ಮಾತ್ರ ಮನೆಯಾಗುತ್ತದೆ. ಹಾಗೆಯೇ ನಾಟಕದ ವಸ್ತುಗಳನ್ನು ನಾಟಕಕಾರ ಸೂಕ್ತ ರೀತಿಯಲ್ಲಿರಿಸಿ ವ್ಯವಸ್ಥೆಗೊಳಿಸಬೇಕು. ವಾಸ್ತವವಾಗಿ ಕಥೆ ವಸ್ತುವಿನ ಅರ್ಥವತ್ತಾದ ಚಲನೆಯನ್ನು ಪಡೆಯುವುದು ಸಂವಿಧಾನದಿಂದ ಮಾತ್ರ. ನಾಟಕದ ರಚನಾ ತಂತ್ರದಲ್ಲಿ ಅರಿಸ್ಟಾಟಲ್ ಮೂರು ಐಕ್ಯಗಳನ್ನು ನಿಯಮಿಸುತ್ತಾನೆ ಅವುಗಳೆಂದರೆ: 1.ಕಾರ್ಯೈಕ್ಯ 2. ಸ್ಥಳೈಕ್ಯ 3. ಕಾಲೈಕ್ಯ ಎಂದು ಹೆಸರಿಸುತ್ತಾನೆ. ಸಂವಿಧಾನದಲ್ಲಿ ಕ್ರಿಯೆಯು ವ್ಯವಸ್ಥೆಗೆ ಅಳವಡುತ್ತದೆ. ಈ ಕ್ರಿಯೆಯು ವಿಚಾರ, ಭಾವನೆ ಮತ್ತು ಪ್ರವೃತ್ತಿ ಶಕ್ತಿಗಳನ್ನು ಚಾಲನೆಗೊಳಿಸುತ್ತದೆ. ನಾಟಕದ ಆರಂಭದಿಂದ ಅಂತ್ಯದವರೆಗಿನ ಏಕಮುಖ ಕ್ರಿಯೆಯು ಶಕ್ತಿ ಎಂದೂ, ಬದಲಿತ ಕ್ರಿಯಾರೂಪವನ್ನು ಪ್ರತಿಶಕ್ತಿ ಎಂದು ಕರೆಯಲಾಗುವುದು. ನಾಟಕಕಾರ ತನ್ನ ನಾಟಕದಲ್ಲಿ ಅತ್ಯಗತ್ಯವಾಗಿ ಸಾಧಿಸಬೇಕಾದ ಪ್ರಮುಖವಾದ ಕಲಾಲಕ್ಷಣವೆಂದರೆ ಸಂವಿಧಾನ. ಏಕೆಂದರೆ ಇದು ಕಥೆಗೆ ಮೆರುಗು, ಪಾತ್ರಗಳಿಗೆವಲನೆಯನ್ನು ಸಂಬಂಧವನ್ನು ಕಲ್ಪಿಸಿ ನಾಟಕಕ್ಕೆ ಒಪ್ಪಂದವನ್ನು ತಂದುಕೊಡುತ್ತದೆ.

**ಪಾತ್ರ:** ನಾಟಕದ ಪ್ರಧಾನಾಂಗಗಳಲ್ಲಿ ಪಾತ್ರ ಅತ್ಯಂತ ಪ್ರಮುಖವಾದುದು. ನಾಟಕ ಮುಖ್ಯವಾಗಿ ಪಾತ್ರಸ್ವರೂಪಿ. ಕಥೆ ಕಾದಂಬರಿ ಗಳಿಗಿಂತ ನಾಟಕದಲ್ಲಿನ ಪಾತ್ರಗಳು ಹೆಚ್ಚು ಖಚಿತವೂ ಪರಿಣಮಕಾರಿಯಾಗಿಯೂ ಇರುತ್ತವೆ. ಏಕೆಂದರೆ ನಾಟಕ ಪ್ರಕಟಗೊಳ್ಳುವುದೇ ಪಾತ್ರಗಳ ಮೂಲಕ. ಇವು ನಾಟಕದ ಕ್ರಿಯಾಭಿವ್ಯಕ್ತಿಯ ಪ್ರಬಲ ಮಾಧ್ಯಮಗಳಾಗಿರುತ್ತವೆ.ಪಾತ್ರಗಳು ನಾಟಕಕಾರನ ಅನಿಸಿಕೆ, ಆಶಯ, ಆದರ್ಶ, ಮತ್ತು ಆಲೋಚನೆಗಳಿಗೆ ಅಭಿವ್ಯಕ್ತಿಯನ್ನು ನೀಡುವ ಪ್ರತ್ಯಕ್ಷ ಮಾಧ್ಯಮಗಳು. ಈ ಪಾತ್ರಗಳ ವ್ಯಕ್ತಿತ್ವದಲ್ಲಿ ಅನೇಕ ಕಡೆ ಲೇಖಕನ ವ್ಯಕ್ತಿತ್ವ ತುಂಬಿಕೊಂಡಿರುತ್ತದೆ. ಅವುಗಳಲ್ಲಿ ಲೇಖಕನ ತನ್ನತನಕ್ಕೆ ಒಂದು ಮೂರ್ತರೂಪ ಒದಗಿಬರುತ್ತದೆ. ವಾಸ್ತವವಾಗಿ ಪಾತ್ರಗಳು ಲೇಖಕನ ಮಾನಸಪುತ್ರರು. ಹೀಗಾಗಿ ಪಾತ್ರಗಳ ಯಸಸ್ಸು ನಾಟಕಕಾರನ ಹಾಗೂ ನಾಟಕದ ಯಶಸ್ಸೂ ಹೌದು.

**ಅಭಿನಯ:** 'ಅಭಿನಯ' ನಾಟಕವನ್ನು ಸಾಹಿತ್ಯ ಕ್ಷೇತ್ರದಿಂದ ಕಲಾಕ್ಷೇತ್ರಕ್ಕೆ ಕೊಂಡೊಯ್ಯುವ ಸಾಧನ. ಅಭಿನಯಕ್ಕೆ 'ನಟನೆ' ಎಂದೂ, ನಟಿಸುವವರನ್ನು 'ನಟರು' ಎಂದೂ ಕರೆಯುತ್ತಾರೆ. ನಾಟಕ ಅಭಿನಯ ರೂಪದಲ್ಲಿ ವ್ಯಕ್ತಗೊಂಡಾಗ ಪ್ರೇಕ್ಷಕ ಹೆಚ್ಚು ರಸಾನುಭವವನ್ನು ಪಡೆಯುತ್ತಾನೆ. ಒಂದು ನಾಟಕದ ಯಶಸ್ಸಿಗೆ ನಾಟಕಕಾರರಂತೆಯೇ ನಟರೂ ಕೂಡ ಹೊಣೆಗಾರರಾಗುತ್ತಾರೆ. ನಟರಲ್ಲಿ ವಿವಿಧ ಬಗೆಯವರಿರುತ್ತಾರೆ. ಅನಕೃ ಅವರು 'ನಾಟಕ ದೇಹವಾದರೆ ನಟನೇ ಆತ್ಮ. ' ಕಸವನ್ನು ರಸವನ್ನಾಗಿ ಮಾಡುವ ಅವನ ಪ್ರಯತ್ನ ಸಫಲನಾಗುವುದು ಎಂದಿದ್ದಾರೆ. ಅಭಿನಯದಲ್ಲಿ ಮಾನವ ಭಾವೋದ್ರೇಕಗಳು, ಚಲನೆಗಳು, ದೇಹ ವಿನ್ಯಾಸಗಳು, ಸ್ವರೋಚ್ಚಾರಣೆ, ಮಾತುಗಳ ಏರಿಳಿತಗಳು ಮತ್ತು ಭಾವಭಂಗಿ ಗಳು ಪ್ರಮುಖವಾಗಿರುತ್ತವೆ.

**ರಂಗಭೂಮಿ:** ನಾಟಕದ ಮೂಲಭೂತ ಅವಶ್ಯಕತೆಗಳಲ್ಲಿ ರಂಗಭೂಮಿ ಅತ್ಯಂತ ಪ್ರಮುಖವಾದುದು. ನಾಟಕದ ವ್ಯಾಪ್ತಿಯಲ್ಲಿ ರಂಗಭೂಮಿ ಅಂತರ್ಗತವಾಗಿದೆ. ನಾಟಕ ದೃಶ್ಯಾತ್ಮಕ ಕಲೆಯಾದ ಕಾರಣ ರಂಗ ಭೂಮಿಯಿಲ್ಲದೆ ಇದರ ಪ್ರದರ್ಶನ ಸಾಧ್ಯವೇ ಇಲ್ಲವಾಗಿದೆ. ರಂಗ ಭೂಮಿ ಎಂದರೆ ಅದು ಕೇವಲ ವೇದಿಕೆಯಷ್ಟೇ ಅಲ್ಲ. ಅದು ವಾಸ್ತವವಾಗಿ ರಂಗಸ್ಥಳ, ರಂಗಶಿಲ್ಪ, ರಂಗಚಿತ್ರ, ಪರದೆ, ಆಸನಗಳು, ವೇಷಭೂಷಣ, ಬೆಳಕು, ಪ್ರೇಕ್ಷಾಂಗಣ, ಶಬ್ದವ್ಯವಸ್ಥೆ ಮುಂತಾದುವುಗಳನ್ನು ಒಳಗೊಂಡಿರುತ್ತದೆ. ನಾಟಕ ಕೃತಿ ಸಾಹಿತ್ಯ ರೂಪದಿಂದ ರಂಗರೂಪಕ್ಕೆ ಬಂದಾಗ ಅದು ನಮ್ಮನ್ನು ವ್ಯಷ್ಟಿ ಮಾಧ್ಯಮದಿಂದ ಸಮಷ್ಟಿ ಮಾಧ್ಯಮಕ್ಕೆ ಕೊಂಡೊಯ್ಯುತ್ತದೆ.

**ಪ್ರೇಕ್ಷಕರು:** ರಂಗಭೂಮಿಯ ಪರಿಕಲ್ಪನೆಯಲ್ಲಿ ಪ್ರೇಕ್ಷಕರು ಅವಿಭಾಜ್ಯ ಅಂಗವಾಗುತ್ತಾರೆ. ರಂಗ ಭೂಮಿಯನ್ನು ನಾಟಕದ ಒಂದು ಅಂಗವಾಗಿ ಪರಿಗಣಿಸುವುದರಿಂದ ಸಹಜವಾಗಿಯೇ ಪ್ರೇಕ್ಷಕರೂ ಕೂಡ ಅದರ ಭಾಗವಾಗುತ್ತಾರೆ. ನಾಟಕದ ಯಶಸ್ಸು ಈ ಪ್ರೇಕ್ಷಕರನ್ನು ಅವಲಂಬಿಸಿರುತ್ತದೆ. ನಾಟಕದ ನಿಜವಾದ ವಿಮರ್ಶಕರು ಪ್ರೇಕ್ಷಕರೇ ಆಗಿರುತ್ತಾರೆ. ನಾಟಕಕ್ಕೆ ವಸ್ತು, ಪಾತ್ರಗಳು ಜೀವಾಳವಾದರೆ, ನಟರಿಗೆ ಪ್ರೇಕ್ಷಕರೇ ಜೀವಾಳ. ಪ್ರೇಕ್ಷಕರ ಪ್ರಾಮಾಣಿಕ ಪ್ರತಿಕ್ರಿಯೆ ನಟರ ನಿಜವಾದ ಆಹಾರ. ನಾಟಕಕ್ಕೆ ಅನುಗುಣವಾಗಿ ಪ್ರೇಕ್ಷಕರು ಹುಟ್ಟಿಕೊಳ್ಳುವಂತೆ, ಪ್ರೇಕ್ಷಕರ ಮನೋಧರ್ಮಕ್ಕೆ ಅನುಗುಣವಾದ ನಾಟಕ ಗಳು ಸೃಷ್ಟಿಯಾಗುತ್ತವೆ. ದೇಶ, ಕಾಲ, ಪರಿಸರ ಮತ್ತು ಪ್ರೇಕ್ಷಕರಿಗನುಗುಣವಾಗಿ ನಾಟಕಗಳು ರಚನೆಗೊಳ್ಳುವುದು ಸ್ವಾಭಾವಿಕವಾದುದು.

**ರಸ:** ಭಾರತೀಯ ನಾಟಕಕಾರರಲ್ಲಿ ಮತ್ತು ನಾಟಕ ಮೀಮಾಂಸಕರಲ್ಲಿ ರಸದ ಬಗ್ಗೆ ಸುಂದರವಾದ ಕಲ್ಪನೆಯಿದೆ ಹಾಗೂ ಅದರ ಶಾಸ್ತ್ರೀಯವಾದ ಪ್ರತಿಪಾದನೆ ಉಂಟು. ನಾಟಕಕ್ಕೆ ಪ್ರಮುಖವಾಗಿ ರಸ ಪೋಷಣೆಯೇ ಅದರ ಮುಖ್ಯ ಉದ್ದೇಶ. ರಸಗಳಲ್ಲಿ ಒಂಬತ್ತು ಬಗೆಗಳಿವೆ ಅವುಗಳೆಂದರೆ: 1. ಶೃಂಗಾರ 2. ಹಾಸ್ಯ 3. ಕರುಣ 4. ರೌದ್ರ 5. ವೀರ 6. ಭಯಾನಕ 7. ಭೀಭತ್ಸ 8. ಅದ್ಭುತ 9. ಶಾಂತ – ಇವುಗಳಲ್ಲಿ ಮೊದಲ ಎಂಟು ರಸಗಳನ್ನು ಭರತಮುನಿ ಸೂಚಿಸಿದ್ದು ಕೊನೆಯ ಒಂದು ಇತ್ತೀಚಿನವರು ಸೇರಿಸಿದುದಾಗಿದೆ. ಸಮರ್ಥ ನಾಟಕಕಾರ ಕೃತಿಯ ವಸ್ತು, ಆಶಯಕ್ಕನುಸಾರವಾಗಿ ರಸಗಳನ್ನು ತನ್ನ ನಾಟಕದಲ್ಲಿ ಮೂಡಿಸಬಲ್ಲ. ಎಲ್ಲಾ ರಸಗಳು ನಾಟಕದಲ್ಲಿ ಇರಲೇಬೇಕೆಂದಿಲ್ಲ. ಹಾಗೆ ನವರಸಗಳನ್ನು ಸ್ವಪ್ರಯತ್ನದಿಂದ ಕಷ್ಟಪಟ್ಟು ತುರುಕುವುದರಿಂದ ಕೃತಿಯಲ್ಲಿ ಕೃತಕತೆಗೆ ದಾರಿ ಆಗುತ್ತದೆ. ಹದವರಿತು ಕೆಲವೇರಸಗಳು ಒಂದು ಕೃತಿಯಲ್ಲಿ ಸ್ವಾಭಾವಿಕವಾಗಿ ಬಂದರೆ ಅದು ಮಹತ್ವತೆಯನ್ನು ಪಡೆದುಕೊಳ್ಳುತ್ತದೆ.

**ನಾಟಕದ ಹುಟ್ಟು, ಬೆಳವಣಿಗೆ:**

ನಾಟಕದ ಹುಟ್ಟು, ಬೆಳವಣಿಗೆಯಲ್ಲಿ ರಂಗಸ್ಥಳದ ಕಲ್ಪನೆ, ಬೆಳವಣಿಗೆಗಳು ಮುಖ್ಯ ಪಾತ್ರವನ್ನು ವಹಿಸಿವೆ. ರಂಗಸ್ಥಳದ ರೂಪ, ಆಕಾರ, ಸಾಮಾನ್ಯ ನಿಯಮಗಳು ಆಯಾ ಕಾಲ ದೇಶಗಳನ್ನು ಅವಲಂಬಿಸಿವೆ. ದೇಶ, ಕಾಲ, ಪರಿಸ್ಥಿತಿಗೆ ಅನುಸಾರವಾಗಿ ಇವುಗಳಲ್ಲಿ ಮಾರ್ಪಾಡು ಕಂಡುಬರುತ್ತವೆ. ಇಂಗ್ಲಿಷ್, ಸಂಸ್ಕೃತ, ಕನ್ನಡ ಮತ್ತು ಗ್ರೀಕ್ ನಾಟಕಗಳ ಹುಟ್ಟು ಬೆಳವಣಿಗೆಗಳನ್ನು ರಂಗಸ್ಥಳದ ಸ್ವರೂಪದ ಹಿನ್ನೆಲೆಯಲ್ಲಿ ಅವಲೋಕಿಸಬಹುದು.

ಜಗತ್ತಿನ ಎಲ್ಲಾ ಜನಾಂಗಗಳಲ್ಲಿಯೂ ನಾಟಕವು ಬಹುತೇಕವಾಗಿ ದೇವತಾ ಪೂಜೆಯ ಅಂಗವಾಗಿ ಹುಟ್ಟಿ ಬೆಳೆದುಕೊಂಡು ಬಂದಿದೆ. ದೈವದ ಆರಾಧನೆಯೆ ನಾಟಕ ಕಲೆಗೆ ಮೂಲ. ಗ್ರೀಕರು ಡಯೋನೈಸಸ್‌ನ ಪೂಜೆಯನ್ನು ಮಾಡುತ್ತಾ ನಾಟಕ ಕಲೆಯನ್ನು ಬೆಳೆಸಿದರು. ಷೇಕ್ಸ್‌ಪಿಯರ್‌ಗಿಂತ ಮುಂಚೆ ಚರ್ಚಿನಲ್ಲಿ ಏಸುವಿನ ಮಹಿಮೆಯನ್ನು ಸಾರುವುದಕ್ಕಾಗಿ ಮೂಕ ದೃಶ್ಯಗಳ ರೂಪದಲ್ಲಿ ನಾಟಕ ಪ್ರಾರಂಭವಾಯಿತು. ಅನಂತರ ನಾಟಕ ಕಲೆ ಷೇಕ್ಸ್‌ಪಿಯರ್‌ನ ಕಾಲಕ್ಕೆ ಬೆಳೆದು ಶ್ರೇಷ್ಠವಾಯಿತು. ಕನ್ನಡ ರಂಗ ಭೂಮಿಯ ಹುಟ್ಟು ಬೆಳವಣಿಗೆಗಳು ಕಾಲನ ಗರ್ಭದಲ್ಲಿ ಮರೆಯಾಗಿ ಹೋಗಿವೆ. ಆದರೂ ತನ್ನ ವಿಶಿಷ್ಟವಾದ ನಾಟ್ಯಕಲೆಯನ್ನು ಅದು ಬಯಲಾಟ, ದೊಡ್ಡಾಟ, ಯಕ್ಷಗಾನ ಸೂತ್ರದ ಗೊಂಬೆಯಾಟ ಮುಂತಾದ ರೂಪಗಳಲ್ಲಿ ಉಳಿಸಿಕೊಂಡಿದೆ. ಕನ್ನಡದ ನಾಟ್ಯ ಕಲೆಯ ಮೂಲರೂಪ ಇವುಗಳಲ್ಲಿದೆ ಎಂದು ಊಹಿಸುವುದಕ್ಕೆ ಅವಕಾಶವಿದೆ. ಈ ಎಲ್ಲಾ ಕಲೆಗಳು ಯಾವುದೋ ಒಂದು ಪೂರ್ವ ಕಾಲದಲ್ಲಿ ಸಂಸ್ಕೃತ ಸಾಹಿತ್ಯದೊಡನೆ ಬೆರೆತು ಅಲ್ಲಿನ ಹೂರಣವನ್ನು ಅಂದರೆ ಕಥಾ ಸಾಹಿತ್ಯವನ್ನು ತಾನು ಬಳಸಿಕೊಂಡಿದ್ದನ್ನು ಕಾಣುತ್ತೇವೆ. ಅಂತೆಯೇ ತನ್ನ ನಾಟ್ಯಕಲೆಯನ್ನು ಆರ್ಯರ ಸುಸಂಸ್ಕೃತ ಶಿಷ್ಟ ನಾಟಕ ರೂಪಕ್ಕೆ ಕೊಟ್ಟಂತೆ ಕಾಣುತ್ತದೆ. ಇಂತಹ ಊಹೆಗೆ ಕಾರಣವೆಂದರೆ ಭರತಮುನಿಯ ನಾಟ್ಯಶಾಸ್ತ್ರದಲ್ಲಿ ಕಂಡುಬರುವ ನಾಟಕದ ಹುಟ್ಟನ್ನು ಕುರಿತ ಕಥೆ. ಆರ್ಯ ಮತ್ತು ದ್ರಾವಿಡ ಸಂಸ್ಕೃತಿಯ ಹಿನ್ನೆಲೆಯಲ್ಲಿ ಈಶ್ವರನು ದ್ರಾವಿಡ ದೇವತೆ. ದೇವತೆಗಳು ಶಿವನ ಮುಂದೆ ನರ್ತನ ಮಾಡಿದರೆ ಚೆನ್ನಾಗಿರುತ್ತದೆಂದು ತಿಳಿದು ಅದನ್ನು ನಾಟಕಕ್ಕೆ ಸೇರ್ಪಡೆ ಮಾಡುತ್ತಾನೆ. ಹೀಗೆ ದ್ರಾವಿಡರ ನರ್ತನ ಕಲೆ, ಆರ್ಯರ ಶಿಷ್ಟ ಸಾಹಿತ್ಯಕ್ಕೂ ಅವರ ಸಾಹಿತ್ಯದ ಹೂರಣ ದ್ರಾವಿಡರ ಆಟಗಳಿಗೂ ಅವತರಿಸಿರಬಹುದೆಂಬ ಊಹೆ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕನ್ನಡ ರಂಗ ಭೂಮಿಯ ಪ್ರಾಚೀನ ಇತಿಹಾಸವು ಇಲ್ಲಿ ಅಡಕವಾಗಿದೆ. ಹತ್ತೊಂಬತ್ತನೇ ಶತಮಾನದ ಕೊನೆ ಇಪ್ಪತ್ತನೇ ಶತಮಾನದ ಆದಿಭಾಗಗಳಲ್ಲಿ ಕನ್ನಡ ರಂಗ ಭೂಮಿಯೂ ನಾಟಕಗಳೂ ವಿಕಾಸವಾದವು. ಆಗಿನ ಕಾಲಕ್ಕೆ ದೇಶ ಪರ್ಯಟನೆ ಮಾಡುತ್ತಾ ತಮ್ಮ ಶ್ರೇಷ್ಠ ಹಿಂದೂಸ್ಥಾನಿ ಗಾಯನದಿಂದ ಮಿನುಗುವ ವಸ್ತ್ರ ಭೂಷಣಗಳಿಂದ ಬಗೆ ಬಗೆಯ ಪರದೆಗಳಿಂದ ಕಂಗೊಳಿಸಿ ಜನರನ್ನು ರಂಜಿಸುತ್ತಿದ್ದ ಪಾರ್ಸಿ, ಮರಾಠಿ ಕಂಪನಿಗಳೊಡನೆ ಕನ್ನಡ ನಾಟಕ ಮಂಡಲಿಗಳು ಪೈಪೋಟಿ ಮಾಡುತ್ತಾ ಬೆಳೆದವು. 20ನೇ ಶತಮಾನದ ಆದಿಭಾಗವು ಕನ್ನಡ ನಾಟಕ ಪರಂಪರೆಯ ಬೆಳವಣಿಗೆಯ ಸುವರ್ಣಯುಗವೆನ್ನಬಹುದು.

**ಕನ್ನಡ ನಾಟಕ ಪರಂಪರೆ:**

ಭಾರತೀಯ ನಾಟಕ ಪರಂಪರೆಯಲ್ಲಿ ಕನ್ನಡ ನಾಟಕ ಸಾಹಿತ್ಯ ಅತ್ಯಂತ ಮಹತ್ವದ್ದಾಗಿದೆ. ಭಾರತದ ಇತರೆ ಪ್ರಾದೇಶಿಕ ನಾಟಕಗಳಿಗಿಂತ ಕನ್ನಡ ನಾಟಕಗಳು ಒಂದು ಹೆಜ್ಜೆ ಮುಂದಿವೆ ಎಂದರೆ ಅತಿಶಯೋಕ್ತಿಯೇನಲ್ಲ. ಅಂದರೆ, ಅಷ್ಟರ ಮಟ್ಟಿಗೆ ಕನ್ನಡ ನಾಟಕಗಳು ವಸ್ತು, ಆಶಯ, ಭಾಷೆ, ತಂತ್ರ, ಪಾತ್ರ, ರಂಗ ಪರಿಕಲ್ಪನೆ, ಭಾಷಾಂತರ, ರೂಪಾಂತರ, ಸೃಜನಶೀಲತೆಯ ದೃಷ್ಟಿಯಿಂದ ತುಂಬಾ ಅದ್ವಿತೀಯವಾದವು. ಹಾಗೆ ಅಂಥ ನಾಟಕ ಪರಂಪರೆಯನ್ನು ನಾಲ್ಕು ವಿಧಗಳಾಗಿ ಗಮನಿಸಬಹುದು ಅವುಗಳೆಂದರೆ:

1. ಪ್ರಾಚೀನ ನಾಟಕ ಪರಂಪರೆ
2. ಕನ್ನಡ ಜನಪದ ನಾಟಕ ಪರಂಪರೆ
3. ಕನ್ನಡ ಭಾಷಾಂತರ ಮತ್ತು ರೂಪಾಂತರ ನಾಟಕ ಪರಂಪರೆ
4. ಆಧುನಿಕ ಕನ್ನಡ ನಾಟಕ ಪರಂಪರೆ

**ಪ್ರಾಚೀನ ನಾಟಕ ಪರಂಪರೆ:** ಕನ್ನಡ ನಾಟಕ ಪರಂಪರೆ ಅತ್ಯಂತ ಪ್ರಾಚೀನವಾದುದು ಎಂಬುದರಲ್ಲಿ ಸಂದೇಹವಿಲ್ಲ. 17 ನೇ

ಶತಮಾನದಲ್ಲಿ ಚಿಕ್ಕದೇವರಾಜರ ಆಸ್ಥಾನದಲ್ಲಿದ್ದ ಸಿಂಗರಾರ್ಯ ರಚಿಸಿದ 'ಮಿತ್ರಾವಿಂದಾ ಗೋವಿಂದ' ಕನ್ನಡದ ಮೊದಲ ನಾಟಕ. ಇದು ಶ್ರೀಹರ್ಷನ 'ರತ್ನಾವಳಿ' ನಾಟಕದ ಕನ್ನಡ ರೂಪ. ಇದಕ್ಕೆ ಮೊದಲ ನಾಟಕ ಎಂಬ ಹಿರಿಮೆ ಪ್ರಾಪ್ತವಾಗಿದ್ದರೂ ಕರ್ನಾಟಕದಲ್ಲಿ ಆಳಿದ ರಾಜವಂಶಗಳ ಮೂಲಕ, ಪ್ರಾಚೀನ ಕನ್ನಡ ಶಾಸನ ಮತ್ತು ಕಾವ್ಯಗಳಲ್ಲಿ ನಾಟಕದ ಪ್ರಸ್ತಾಪ ಕಂಡುಬರುತ್ತವೆ. ಈ ನಾಡಿನಲ್ಲಿ ನಾಟಕ ಶಾಲೆಗಳಿದ್ದವು ಎಂಬುದಕ್ಕೆ ಆಧಾರಗಳು ಸಿಗುತ್ತವೆ. ಗೋವಿಂದವೈದ್ಯ ತನ್ನ ಕಾವ್ಯದಲ್ಲಿ ಮೈಸೂರಿನ ಕಂಠೀರವ ನರಸರಾಜರ (1638–59) ಅರಮನೆಯಲ್ಲಿ ನಾಟಕಶಾಲೆಗಳಿದ್ದವೆಂಬುದರ ಬಗ್ಗೆ ಪ್ರಸ್ತಾಪಿಸಿದ್ದಾನೆ. ಲಿಂಗಣ್ಣ ಕವಿ 'ಕೆಳದಿ ನೃಪವಿಜಯ' ಕಾವ್ಯದಲ್ಲಿ ಕೆಳದಿಯ ವೆಂಕಟಪ್ಪನಾಯಕ (1582–1620) ತನ್ನ 'ಇಕ್ಕೇರಿಯರಮನೆಯೊಳ್ ಚಿತ್ರಕರ ರಚನಾಕೌಶಲ್ಯದಿಂ ನಾಟಕಶಾಲೆಯಂ ನಿರ್ಮಿಸಿದನ್' ಎಂಬ ಮಾಹಿತಿಯಿದೆ. ರತ್ನಾಕರವರ್ಣಿಯ 'ಭರತೇಶವೈಭವ'ದಲ್ಲಿ ಪೂರ್ವನಾಟಕ ಸಂಧಿ, ಉತ್ತರನಾಟಕ ಸಂಧಿಗಳಲ್ಲಿ ಶೃಂಗಾರಮಯವಾದ ನಾಟಕಶಾಲೆಯ ವರ್ಣನೆಯನ್ನು ಕೊಡುತ್ತಾನೆ. ಕೃಷ್ಣದೇವರಾಯನ ರಾಜಧಾನಿಯಲ್ಲಿ ಪಟ್ಟದನಾಟಕಶಾಲೆ, ಇಕ್ಕೇರಿ, ತಂಜಾವೂರು ಮೊದಲಾದ ಪ್ರಾದೇಶಿಕ ಕೇಂದ್ರಗಳಲ್ಲೂ ನಾಟಕಶಾಲೆಗಳಿದ್ದವೆಂಬುದರ ಬಗ್ಗೆ ಬಿ.ಎ.ಸಾಲೆತೊರೆಯವರು ಪ್ರಸ್ತಾಪಿಸಿದ್ದಾರೆ. ಧಾರವಾಡ ಜಿಲ್ಲೆಯ ಮುಳಗುಂದದಲ್ಲಿ (ಇಂದು ಮುಗದ ಎಂಬ ಹಳ್ಳಿ) ಕಂಡುಬರುವ 'ಮೂಗಡದ ಶಾಸನ' (1045) ಮೊಟ್ಟ ಮೊದಲ ದಾಖಲೆಯಾಗಿದ್ದು, ಇದರಲ್ಲಿ 11 ನೇ ಶತಮಾನದ ನಾಟಕಶಾಲೆಯ ಬಗ್ಗೆ ಪ್ರಸ್ತಾಪಿಸಿರುವುದು ಕಂಡುಬರುತ್ತದೆ. ಹೊಯ್ಸಳ ದೊರೆ ವೀರಬಲ್ಲಾಳ ಕಲಾವಂತ ನಟನಾಗಿದ್ದನೆಂದು ಸೊರಬದ ಶಿಲಾಶಾಸನದಲ್ಲಿ (1208) ಕಂಡುಬರುತ್ತದೆ. ಪಂಪನ ಆದಿಪುರಾಣದಲ್ಲಿ ನೀಲಾಂಜನೆ ನಾಟಕ ಮಾಡಿದುದರ ಬಗ್ಗೆ ವರ್ಣನೆಯಿದೆ. ರನ್ನನ ಅಜಿತಪುರಾಣದಲ್ಲಿ ನಾಟಕವಧಿಯ ವಿವರಣೆಯಿದೆ. ಕುಮಾರವ್ಯಾಸ, ಭೀಮಕವಿ, ದುರ್ಗಸಿಂಹ ಇವರು ತಮ್ಮ ಕೃತಿಗಳಲ್ಲಿ ನಾಟಕದ ಬಗ್ಗೆ ಪ್ರಸ್ತಾಪಿದ್ದಾರೆ. ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ನಾಟಕೀಯ ಪ್ರಸಂಗಗಳು ಹಲವೆಡೆ ಸಿಗುತ್ತವೆ. ಅವುಗಳಲ್ಲಿ ಮುಖ್ಯವಾಗಿ ರನ್ನನ 'ಗದಾಯುದ್ಧ' ಮತ್ತು ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಇವುಗಳನ್ನು ನಿದರ್ಶನವಾಗಿ ನೋಡಬಹುದು.

**ಕನ್ನಡ ಜನಪದ ನಾಟಕ ಪರಂಪರೆ:** ಕರ್ನಾಟಕ ಜನಪದ ರಂಗಭೂಮಿಯಲ್ಲಿ ಹಲವಾರು ಪ್ರಕಾರಗಳು ಕಂಡುಬರುತ್ತವೆ ಅವುಗಳಲ್ಲಿ: ಬಯಲಾಟ, ಮೂಡಲಪಾಯ, ಪಡುವಲಪಾಯ, ಯಕ್ಷಗಾನ, ದೊಡ್ಡಾಟ, ಸಣ್ಣಾಟ, ತೆಂಕತಿಟ್ಟು, ಬಡಗುತಿಟ್ಟು, ಗೊಂಬೆಯಾಟ, ದಾಸರಾಟ, ತೊಗಲು ಗೊಂಬೆಯಾಟ ಶ್ರೀಕೃಷ್ಣ ಪಾರಿಜಾತ, ಶೈವ ಸಣ್ಣಾಟ, ಸಾಮಾಜಿಕ ಸಣ್ಣಾಟ ಮುಂತಾದುವುಗಳಿವೆ. ನಾಟಕದಲ್ಲಿ ಬಯಲಾಟಗಳು ಆಯಾ ಪ್ರದೇಶದ ವೈಶಿಷ್ಟ್ಯಗಳ ಹಿನ್ನೆಲೆಯಲ್ಲಿ ಬೆಳೆದು ಬಂದಿದೆ. ಇದರಿಂದ ಪ್ರಾದೇಶಿಕ ವ್ಯತ್ಯಾಸಗಳನ್ನೊಳಗೊಂಡ ವಿಭಿನ್ನ ಪ್ರಕಾರಗಳಾಗಿ ಬೆಳೆದು ನಿಂತಿವೆ. ಪ್ರಾಚೀನ ಶಿಷ್ಟ ಕನ್ನಡ ನಾಟಕ ಪರಂಪರೆಯ ಜೊತೆಜೊತೆಯಲ್ಲೇ ಸಮಾನಾಂತರವಾಗಿ ಬೆಳೆದುಕೊಂಡು ಬಂದಿರುವ 'ಜನಪದ ನಾಟಕ ಪರಂಪರೆ'ಯು ಒಂದು ಶ್ರೀಮಂತ ಕಲೆಯಾಗಿದ್ದು, ಶಿಷ್ಟ ಸಾಹಿತ್ಯ ಸಂಸ್ಕೃತಿ ಜೊತೆಗೆ ಪೂರಕವಾಗಿ, ನಿರಂತರವಾಗಿ, ಸಮೃದ್ಧವಾಗಿ ಹಾಗೂ ಅವ್ಯಾಹತವಾಗಿ ಇವತ್ತಿನವರೆಗೂ ಉಳಿದು ಬೆಳೆದುಕೊಂಡು ಬಂದಿರುವುದು ಪ್ರಸ್ತುತದಲ್ಲಿ ತುಂಬಾ ಮಹತ್ವದ ವಿಷಯ. ಆದರೆ ಇನ್ನೂ ಕೆಲವು ರೂಪಕ(ಕಲೆ)ಗಳು ಆಧುನಿಕ ಬದುಕಿನ ಸವಾಲನ್ನು ಎದುರಿಸಲಾಗದೆ ಮಂಕಾಗಿ ಹೋದರೆ, ಇನ್ನೂ ಕೆಲವು ಕಲೆಗಳು ನಮ್ಮ ಜೀವಂತ ಸಂಸ್ಕೃತಿಯೊಂದಿಗೆ ಪ್ರಸ್ತುತದಲ್ಲಿ ಗಟ್ಟಿಯಾಗಿ ನೆಲೆಯೂರಿ ನಿಂತಿವೆ. ಅಲ್ಲದೆ ಆ ಕಲೆಗಳು ಪ್ರಸ್ತುತ ಕಾಲದ ನಾಟಕ ಪರಂಪರೆಯ ಈ ಹೊತ್ತಿನವರೆಗೂ ತನ್ನದೇ ಆದ ದಟ್ಟ ಪ್ರಭಾವ ಪ್ರೇರಣೆಯನ್ನು ನೀಡುತ್ತಾ ಬಂದಿರುವ ಸಂಗತಿಯು ಕೂಡ ತುಂಬಾ ಬೆಲೆಯುಳ್ಳದ್ದಾಗಿದೆ.

ಕರ್ನಾಟಕದಲ್ಲಿ ಜನಪದ ರಂಗ ಭೂಮಿಯ ಪ್ರಾಚೀನತೆಯ ಕೆಲವೊಂದು ಪ್ರಕಾರಗಳನ್ನು ಬಯಲಾಟದ ಮಾದರಿಯಾಗಿ ಗುರುತಿಸಲಾಗಿದೆ. ಅವುಗಳಲ್ಲಿ 'ಪಗರಣ' ಮತ್ತು 'ಬಹುರೂಪಿ' ಮುಖ್ಯವಾಗಿವೆ. ಕನ್ನಡದ ಕವಿರಾಜಮಾರ್ಗದಲ್ಲಿ ಪಗರಣದ ಬಗ್ಗೆ ಪ್ರಸ್ತಾಪವಿದೆ. ಇದು ಅಭಿನಯ ಪ್ರಧಾನವಾಗಿದ್ದು, ಕುಣಿತದ ಜೊತೆಯಲ್ಲಿ ಪ್ರದರ್ಶನಗೊಳ್ಳುವ ಜನಪದ ಕಲೆಯಾಗಿದೆ. 'ಪಗರಣಿಗರಂ ಕಂಡವರ್ನಗುವರ್ ಅಲ್ಲದೆ ಅವರಾಟಕ್ಕೆ ಲಕ್ಷಣಮಂ ನೋಡರ್' ಎಂಬ ಮಾತು 'ಧರ್ಮಾಮೃತ' ದಲ್ಲಿ ಬಂದಿದೆ. ಪಗರಣದಲ್ಲಿ ವೇಷಭೂಷಣಗಳೊಂದಿಗೆ ಜನರನ್ನೂ ರಂಜಿಸಲಾಗುತ್ತಿತ್ತೆಂಬುದನ್ನು ನೋಡಿದರೆ, ಆಕಾಲಕ್ಕೆ ದೇಶೀಯ ರಂಗಕಲೆಗಳು ಪ್ರಚಲಿತದಲ್ಲಿದ್ದವು ಎಂಬುದು ಗೊತ್ತಾಗುತ್ತದೆ. ಬಹುರೂಪ ಎಂದರೆ ಹಲವು ವಿಧದ ವೇಷತೊಟ್ಟು ಜನರನ್ನು ರಂಜಿಸುವ ಕಲೆ ಎಂದರ್ಥ. 12 ನೇ ಶತಮಾನದಲ್ಲಿ ಬಹುರೂಪಿ ಚೌಡಯ್ಯನೆಂಬ ಶಿವಶರಣ ಬಹುರೂಪ ಕಲೆಗಾರಿಕೆಯನ್ನು ಕಾಯಕವನ್ನಾಗಿ ಮಾಡಿಕೊಂಡಿದ್ದನೆಂಬುದು ಗೊತ್ತಾಗುತ್ತದೆ. ಈತ ಹಲವಾರು ವಚನಗಳನ್ನು ರಚಿಸಿದ್ದಾನೆ. ಬಹುರೂಪದ ಕಲೆ ಬಯಲಾಟದ ಒಂದು ಮಾದರಿಯನ್ನು ಹೋಲುತ್ತದೆ. ಈದೃಷ್ಟಿಯಿಂದ ಬಹುರೂಪಿ ಜನಪದ ರಂಗಕಲೆಯಾಗಿದ್ದು, ಇದನ್ನು ವೃತ್ತಿಯಾಗಿಸಿಕೊಂಡ ಜನಾಂಗ ಈಗಲೂ ಕೂಡ ಉತ್ತರ ಕರ್ನಾಟಕದಲ್ಲಿದ್ದಾರೆ.

**ಕನ್ನಡ ಭಾಷಾಂತರ ಮತ್ತು ರೂಪಾಂತರ ನಾಟಕ ಪರಂಪರೆ:** ಆಧುನಿಕ ಕನ್ನಡ ನಾಟಕದ ಪ್ರಾರಂಭದ ವರ್ಷಗಳಲ್ಲಿ ಅನುವಾದಗಳು, ಭಾಷಾಂತರಗಳು, ರೂಪಾಂತರಗಳು ಸ್ವಂತ ಕೃತಿಗಳಿಗಿಂತ ಬಹು ಹೆಚ್ಚು ಸಂಖ್ಯೆಯಲ್ಲಿ ಬಂದವು. 19 ನೇ ಶತಮಾನದ ಕಡೆಯ ಭಾಗದಲ್ಲಿ ಅಂದರೆ 1882 ರಲ್ಲಿ 'ಬಾಲಿವಾಲಾ' ಎಂಬ ಪಾರ್ಸಿ ನಾಟಕ ಸಂಘದವರು ಮೈಸೂರು ಅರಸರ ಆಸ್ಥಾನವನ್ನು ಸಂದರ್ಶಿಸಿದರು. ಅವರು ಅಂದಿಗೆ ಆಧುನಿಕವೆನ್ನಬಹುದಾದ ಭವ್ಯರಂಗ ತಂತ್ರಗಳನ್ನು ತಮ್ಮ ಪ್ರದರ್ಶನಗಳಲ್ಲಿ ಬಳಸುತ್ತಿದ್ದರು.ಈ ಚಾರಿತ್ರಿಕ ಘಟನೆ ಅಂದಿನ ಕನ್ನಡ ನಾಟಕಕಾರರಿಗೆ, ನಟರಿಗೆ ಸ್ಫೂರ್ತಿದಾಯಕವಾಯಿತು. ತತ್ಫಲವಾಗಿ 1880 ರ ಅನಂತರ ಕರ್ನಾಟಕದ ಮೊತ್ತಮೊದಲ ವೃತ್ತಿ ನಾಟಕ ಕಂಪನಿ "ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭೆ" ಅಸ್ತಿತ್ವಕ್ಕೆ ಬಂತು. ಈ ಹಿನ್ನೆಲೆಯಲ್ಲಿ ಆಸ್ಥಾನದ ವಿದ್ವಾಂಸರು ಈ ಕಂಪನಿಯ ಸಲುವಾಗಿ ಸಂಸ್ಕೃತ ನಾಟಕಗಳನ್ನು ಅನುವಾದಿಸತೊಡಗಿದರು. ಅವರಲ್ಲಿ ಪಂಡಿತ ಬಸಪ್ಪಶಾಸ್ತ್ರಿ (1899)ಗಳು ಆರು ಸಂಸ್ಕೃತ ನಾಟಕಗಳನ್ನು ಅನುವಾದಿಸಿದರು. ಇವುಗಳಲ್ಲಿ 'ಶಾಕುಂತಲ' ನಾಟಕ ಕನ್ನಡದಲ್ಲಿ ಅಪೂರ್ವ ಕೃತಿಯಾಗಿ ಹೊರಹೊಮ್ಮಿದೆ. ಆಳಸಿಂಗಾಚಾರ್ಯರು ಭಾಸನ ಎರಡು ನಾಟಕಗಳನ್ನು ಅನುವಾದಿಸಿದರು. ನಂಜನಗೂಡು ಸುಬ್ಬಾಶಾಸ್ತ್ರಿಗಳ 'ಮೃಚ್ಛಕಟಿಕ' ಉತ್ತಮ ಭಾಷಾಂತರ ಕೃತಿಯಾಗಿದೆ. 1885 ರಲ್ಲಿ ಗುಂಡೋಕೃಷ್ಣ ಚುರಮರಿಯವರು 'ಒಥೆಲೋ' ನಾಟಕವನ್ನು 'ರಾಘವೇಂದ್ರರಾಯ' ನಾಟಕವೆಂದು ರೂಪಾಂತರಿಸಿದ್ದರು. ಅನಂತರ ಬಸವಪ್ಪಶಾಸ್ತ್ರಿಗಳು 'ಶೂರಸೇನ ಚರಿತೆ' ಎಂದು ಭಾಷಾಂತರಿಸಿದರು. ಎಂ.ಎಲ್.ಶ್ರೀಕಂಠೇಗೌಡರು

'ಪ್ರತಾಪರುದ್ರದೇವ' (ಮ್ಯಾಕ್‌ಬೆತ್), ಪ್ರಮೀಳಾರ್ಜುನೀಯ' (ಎ ಮಿಡ್ ಸಮ್ಮರ್ ನೈಟ್ ಡ್ರೀಮ್ಸ್), ಸಿ.ಆನಂದರಾಯರು 'ರಾಮವರ್ಮ–ಲೀಲಾವತಿ' (ರೋಮಿಯೋ ಜೂಲಿಯಟ್) ಎಂಬ ಹೆಸರಿನಲ್ಲಿ ಷೇಕ್ಸ್‌ಪಿಯರ್ ನಾಟಕವನ್ನು ಕನ್ನಡಕ್ಕೆ ತಂದರು. ಹಾಗೆಯೇ ಎಂ.ಎಸ್.ಪುಟ್ಟಣ್ಣ 'ಹೇಮಚಂದ್ರ ವಿಲಾಸ' (ಕಿಂಗ್ ಲಿಯರ್) ಅನ್ನು ಕನ್ನಡಕ್ಕೆ ತಂದರು. ಹೀಗೆ ಕನ್ನಡ ನಾಟಕ ಸಾಹಿತ್ಯವನ್ನು ಶ್ರೀಮಂತಗೊಳಿಸುವುದರಲ್ಲಿ ಎಸ್.ವಿ.ಪರಮೇಶ್ವರಭಟ್ಟ, ಕೆ.ಕೃಷ್ಣಮೂರ್ತಿ, ಗಣಪತಿಮೊಳೆಯಾರ ಹಾಗೂ ಸಿ.ಪಿ.ಕೃಷ್ಣಕುಮಾರ್ ಸೇರಿದಂತೆ ಹಲವರು ಅನುವಾದ ನಾಟಕಗಳನ್ನು ಕನ್ನಡೀಕರಿಸಿದ್ದಾರೆ.

**ಆಧುನಿಕ ನಾಟಕ ಪರಂಪರೆ:** ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾಟಕ ಪ್ರಕಾರ ಅತ್ಯಂತ ವಿಶಿಷ್ಟವಾಗಿ ಹುಲುಸಾಗಿ ಬೆಳೆದಿದೆ. ಹಲವಾರು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳು ರಚನೆಯಾಗಿವೆ. ಬಿ.ಎಂ.ಶ್ರೀ. ಅವರ ಅಶ್ವತ್ಥಾಮನ್', 'ಗದಾಯುದ್ಧ ನಾಟಕ' 'ಪಾರಸಿಕರು', ಇದರಲ್ಲಿ ಅಶ್ವತ್ಥಾಮನ್ (ರೂಪಾಂತರ) ಕನ್ನಡದ ಮೊತ್ತಮೊದಲ ದುರಂತ ನಾಟಕವಾಗಿದೆ. ಇದು ಸೋಫೋಕ್ಲಿಸ್‌ನ 'ಏಜಾಕ್ಸ್' ನಾಟಕದ ಮಾದರಿಯಲ್ಲಿದೆ. ಕುವೆಂಪು ಅವರ ನಾಟಕಗಳಲ್ಲಿ ಸ್ಮಶಾನ ಕುರುಕ್ಷೇತ್ರ, ಶೂದ್ರ ತಪಸ್ವಿ, ಜಲಗಾರ ಇತರೆ ನಾಟಕಗಳು ಪ್ರಸಿದ್ಧವಾಗಿವೆ. ಬೇಂದ್ರೆ ಅವರ ಸಾಯೋಆಟ, ದೆವ್ವದ ಮನೆ, ಹೊಸ ಸಂಸಾರ, ಕೈಲಾಸಂ ಅವರ ಬಹಿಷ್ಕಾರ, ಬಂಡ್ವಾಳಿಲ್ಲದ ಬಡಾಯಿ, ಪೋಲಿ ಕಿಟ್ಟಿ, ಸೂಳೆ, ಟೊಳ್ಳು ಗಟ್ಟಿ ...... ಶ್ರೀರಂಗರ ಹರಿಜನ್ವಾರ, ಧರ್ಮವಿಜಯ, ಶೋಕಚಕ್ರ, ರಂಗ ಭಾರತ,ಸ್ವರ್ಗಕ್ಕೆ ಮೂರೆ ಬಾಗಿಲು,....... ಪರ್ವತವಾಣಿ (ಪಿ. ನರಸಿಂಗರಾಯರು) ಅವರ ರಣಹದ್ದು, ಬಹದ್ದೂರ ಗಂಡು, ಸತಿ ಸಾವಿತ್ರಿ, ಹಗ್ಗದ ಕೊನೆ......ಮಾಸ್ತಿಯವರ ಯಶೋಧರಾ, ಕಾಕನಕೋಟೆ, ಸಂಸರ ಸುಗುಣ ಗಂಭೀರ, ಮಹಾಪ್ರಭು, ವಿಗಡ ವಿಕ್ರಮರಾಯ, ವಿಜಯ ನಾರಸಿಂಹ, ಸಂಚಿಯ ಹೊನ್ನಿ...... ಗಿರೀಶ್ ಕಾರ್ನಾಡ್ ರ ಯಯಾತಿ, ತುಘಲಕ್, ಹಯವದನ, ತಲೆದಂಡ...... ಲಂಕೇಶ್ ರ ತೆರೆಗಳು, ಬಿರುಕು, ಸಂಕ್ರಾಂತಿ, ಕ್ರಾಂತಿ ಬಂತು ಕ್ರಾಂತಿ..... ಚಂದ್ರಶೇಖರ ಕಂಬಾರರ ಜೋಕುಮಾರಸ್ವಾಮಿ, ಸಂಗ್ಯಾ ಬಾಳ್ಯಾ, ಜೈಸಿದ್ಧನಾಯಕ, ಕಾಡುಕುದುರೆ......ದಲಿತ ಕವಿ ಎಂದು ಪ್ರಖ್ಯಾತರಾಗಿರುವ ಸಿದ್ಧಲಿಂಗಯ್ಯನವರ ಏಕಲವ್ಯ, ನೆಲಸಮ, ಪಂಚಮ, ಅರವಿಂದಮಾಲಗತ್ತಿಯವರ ಮಸ್ತಕಾಭಿಷೇಕ, ಸಮುದ್ರದೊಳಗಣ ಉಪ್ಪು, ಹೊಸ ಬ್ರಾಹ್ಮಣ ಸನ್ಯಾಸಿ, ಎಚ್.ಎಸ್.ಶಿವಪ್ರಕಾಶ್ ಅವರ ಮಹಾಚೈತ್ರ, ಸುಲ್ತಾನ್ ಟಿಪ್ಪು, ಮಾದಾರಿ ಮಾದಯ್ಯ..... ಹೀಗೆ ಕನ್ನಡ ಸಾಹಿತ್ಯದ ನಾಟಕ ಪ್ರಕಾರಕ್ಕೆ ಕೆ.ವಿ.ಸುಬ್ಬಣ್ಣ, ಚಂಪಾ, ಜಿ.ಬಿ. ಜೋಶಿ, ಪ್ರೇಮಾ ಕಾರಂತ, ಸಿ.ಆರ್.ಸಿಂಹ, ಪು.ತಿ.ನ, ಕೆ.ವೈ.ನಾರಾಯಣ, ಬಿ.ಸಿ.ರಾಮಚಂದ್ರಶರ್ಮ, ಬಿ.ಪುಟ್ಟಸ್ವಾಮಯ್ಯ, ಪ್ರಸನ್ನ ಮುಂತಾದವರು ಕನ್ನಡ ನಾಟಕ ಪ್ರಕಾರವನ್ನು ಶ್ರೀಮಂತಗೊಳಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಗಿರಿಡ್ಡಿ ಗೋವಿಂದರಾಜ (ಸಂ.) (2010), ಯುಗಧರ್ಮ ಹಾಗೂ ಸಾಹಿತ್ಯದರ್ಶನ ಸಾಹಿತ್ಯ ಮತ್ತು ಸಾಹಿತ್ಯ ಪ್ರಜ್ಞೆ, ಪ್ರಕಾಶಕರು : ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–02.
2. ಗಿರಿಡ್ಡಿ ಗೋವಿಂದರಾಜ (ಸಂ.) (2010), ಕನ್ನಡ ಸಾಹಿತ್ಯ ಸಂಗಾತಿ, ಕೀರ್ತಿನಾಥ ಕುರ್ತಕೋಟಿ ಸಮಗ್ರ ಸಾಹಿತ್ಯ ಸಂಪುಟ–1, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು–02.
3. ಪ್ರೊ..ಎಲ್.ಎಸ್.ಶೇಷಗಿರಿರಾವ್ (2013), ಹೊಸಗನ್ನಡ ಸಾಹಿತ್ಯ ಚರಿತ್ರೆ, ಪ್ರಕಾಶಕರು : ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು–04.
4. ಹೆಚ್.ನಂಜೇಗೌಡ (1995), ಕನ್ನಡ ಸಾಹಿತ್ಯ ಚರಿತ್ರೆ, ಪ್ರಕಾಶಕರು : ಚೇತನ ಪುಸ್ತಕಾಲಯ, ಮೈಸೂರು.
5. ಪ್ರೊ.ಎ.ರಂಗಸ್ವಾಮಿ, (ಪ್ರ.ಸಂ), ಲೇಖಕರು: ಡಾ.ಮ.ರಾಮಕೃಷ್ಣ, (2012), ಹೊಸಗನ್ನಡ ಕಾವ್ಯ ಪ್ರಕಾರಗಳು. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು–06.
6. ಪ್ರೊ.ಎ.ರಂಗಸ್ವಾಮಿ, (ಪ್ರ.ಸಂ), ಲೇಖಕರು : ಡಾ.ಜಿ.ಆರ್.ತಿಪ್ಪೇಸ್ವಾಮಿ, (2012), ಆಧುನಿಕ ಸಾಹಿತ್ಯ ಪ್ರಕಾರಗಳು. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರಾಮುವಿ, ಮೈಸೂರು–06.
7. ರಂ.ಶ್ರೀ.ಮುಗಳಿ (1971), ಕನ್ನಡ ಸಾಹಿತ್ಯ ಚರಿತ್ರೆ, ಪ್ರಕಾಶಕರು : ಉಷಾ ಸಾಹಿತ್ಯ ಮಾಲೆ, ಮೈಸೂರು–01.